ಅ) **ಶಿರಿಯಾಣ** : ಯೋಜನೆಗೆ ಬೇಕಾದ ಎಲ್ಲಾ ಸಾಮಗ್ರಿಗಳನ್ನು ಸಂಗ್ರಹಿಸಲಾಗಿದೆ. ಟ್ಯಾಂಕ್ ಕೆಲಸವನ್ನು ಶೀಘ್ರವಾಗಿ ಮಾಡಿಸಿ ಯೋಜನೆಯನ್ನು ಕಾರ್ಯಗತಗೊಳಿಸಲಾಗುವುದು.

ಹಿರಿಯಾಣ : ಕೆ.ಇ.ಬಿ. ಇಲಾಖೆಯಿಂದ ವಿದ್ಯುತ್ ಸಂಪರ್ಕವನ್ನು ತೆಗೆದುಕೊಂಡು ಯೋಜನೆಯನ್ನು ಕಾರ್ಯಗತಗೊಳಿಸಲಾಗುವುದು.

ತಂಡಾರು : ಯೋಜನೆಗೆ ಬೇಕಾದ ಎಲ್ಲಾ ಸಾಮಗ್ರಿಗಳನ್ನು ಸಂಗ್ರಹಿಸಲಾಗಿದೆ. ಟ್ಯಾಂಕ್ ಕೆಲಸವನ್ನು ಶೀಘ್ರವಾಗಿ ಮುಗಿಸಿ ಯೋಜನೆಯನ್ನು ಕಾರ್ಯಗತ ಗೊಳಿಸಲಾಗುವುದು.

ಬಿಳ್ಳಾಡಿ : ಬಿಳ್ಳಾಡಿ ಗ್ರಾಮದಲ್ಲಿ ಜಲಮೂಲ ದೊರೆಯುವುದು ಕಷ್ಟವಾಗಿರುವುದರಿಂದ ಈಗ ಕೊರೆದಿರುವ ಕೊಳವೆ ಬಾವಿಯ ಇಳುವರಿಯನ್ನು 1996ರ ಮೇ ಅಂತ್ಯದವರೆಗೆ ಪರೀಕ್ಷಿಸಿ, ಯೋಜನೆಯನ್ನು ಪೂರ್ಣಗೊಳಿಸಲು ಸೂಕ್ತ ಕ್ರಮವನ್ನು ತೆಗೆದುಕೊಳ್ಳಲಾಗುವುದು.

ಇ) ಶಿರಿಯಾರ ಮತ್ತು ಬೆಳ್ಳಾಡಿ ಯೋಜನೆಗಳನ್ನು 1997ರ ಮೇ ಅಂತ್ಯದೊಳಗೆ ಪೂರ್ಣಗೊಳಿಸಲಾಗುವುದು. ಹಿರಿಯಾಣ ಮತ್ತು ತಪುಂಡಾರ ಯೋಜನೆಗಳನ್ನು ಕ್ರಮವಾಗಿ 1996 ಮೇ ಮತ್ತು 1997ರ ಮಾರ್ಚ್ ಅಂತ್ಯದೊಳಗೆ ಪೂರ್ಣಗೊಳಿಸಲಾಗುವುದು.

ಕುಂದಾಪುರ ತಾಲ್ಲೂಕು ಹೆಂಗವಳ್ಳಿ ಗ್ರಾಮದಲ್ಲಿ ಸೇತುವೆ ತೇಲಿ ಹೋದ ಬಗ್ಗೆ.

636 - ಶ್ರೀ ಕೆ. ಪ್ರತಾಪಚಂದ್ರಶೆಟ್ಟಿ (ಕುಂದಾಪುರ) : ಮಾನ್ಯ ಲೋಕೋಪಯೋಗಿ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕುಂದಾಪುರ ತಾಲ್ಲೂಕು ಹೆಂಗವಳ್ಳಿ ಗ್ರಾಮದಲ್ಲಿ ನೆರೆಯಿಂದ ಸೇತುವೆ ತೇಲಿ ಹೋಗಿರುವುದು ಸರ್ಕಾರ ಗಮನಕ್ಕೆ ಬಂದಿದೆಯೇ.

ಆ) ಯಾವ ವರ್ಷದಲ್ಲಿ ತೇಲಿ ಹೋಗಿದೆ ಮತ್ತು ದುರಸ್ತಿ ಮಾಡಲು ತೆಗೆದು ಕೊಂಡ ಕ್ರಮವೇನು?

ಶ್ರೀ ಎಂ.ಸಿ. ಜಬ್ಬಾರ್. ಕೊಜಲಗಿ (ಲೋಕೋಪಯೋಗಿ ಸಚಿವರು) :

ಅ) ಈ ಕಾಲು ಸೇತುವೆ ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿ ಬರುತ್ತಿದ್ದು, ಸೇತುವೆ ಚಾವಣಿ ಸ್ಥಳಾಂತರವಾಗಿರುತ್ತದೆಯೇ ಹೊರತು ಸೇತುವೆ ತೇಲಿಹೋಗಿಲ್ಲ.

ಆ) ಸೇತುವೆ ಛಾವಣಿ 1993ರ ಮಳೆಗಾಲದಲ್ಲಿ ಸ್ಥಳಾಂತರವಾಗಿರುತ್ತೆ, ದುರಸ್ತಿಗೆ ಅಂದಾಜು ಮಂಜೂರಾಗಿದ್ದು ಕೆಲಸ ಕೈಗೊಳ್ಳಲಾಗುವುದು.

ಹಾಲಾಡಿ ಸಬ್ ಸ್ಟೇಷನ್ ಕೆಲಸ ಸ್ಥಗಿತ

637 - ಶ್ರೀ ಕೆ. ಪ್ರತಾಪಚಂದ್ರಶೆಟ್ಟಿ (ಕುಂದಾಪುರ) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಬ) ಹಾಲಾಡಿ ಸಬ್-ಸ್ಟೇಷನ್ ಮಂಜೂರಾಗಿದ್ದು, ಕೆಲಸ ಸ್ಥಗಿತವಾಗಲು ಕಾರಣವೇನು?

ಕ) ಹಾಲಾಡಿ ಸಬ್-ಸ್ಟೇಷನ್ ಕೆಲಸ ಎಂದು ಪೂರ್ಣಗೊಳಿಸಲಾಗುವುದು ಮತ್ತು ಎಂದು ಕಾರ್ಯನಿರ್ವಹಿಸಲು ಪ್ರಾರಂಭಿಸುವುದು?

ಶ್ರೀ ಜೆ.ಹೆಚ್. ಪಟೇಲ್ (ಉಪ ಮುಖ್ಯಮಂತ್ರಿಗಳು) :

ಅ) ಕೆಲಸ ಸ್ಥಗಿತಗೊಂಡಿರುವುದಿಲ್ಲ.

ಆ) ಏಪ್ರಿಲ್ '96ರಿಂದ ನಿರ್ಮಾಣ ಕಾರ್ಯವನ್ನು ಚುರುಕುಗೊಳಿಸಿ, ಮಾರ್ಚ್ 97ರ ಅಂತ್ಯದ ವೇಳೆಗೆ, ನಿರ್ಮಾಣ ಕಾರ್ಯವನ್ನು ಪೂರ್ಣಗೊಳಿಸಿ ಈ ಸಬ್-ಸ್ಟೇಷನ್ನನ್ನು ಚಾಲನೆಗೊಳಿಸಲು ಉದ್ದೇಶಿಸಿದೆ.

ನಗರ ಪ್ರದೇಶದ ಬಡವರಿಗೆ ಹಸಿರು ಕಾರ್ಡು ವಿತರಣೆ.

638 - ಶ್ರೀ ಡಿ.ಆರ್. ಪಾಟೀಲ್ (ಗದಗ್) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನಗರ ಪ್ರದೇಶದಲ್ಲಿಯ ಬಡಜನರಿಗೆ ಹಸಿರು ಕಾರ್ಡನ್ನು ನವೆಂಬರ್ 1ನೇ 1995ರಿಂದ ವಿತರಿಸಲು ಸರ್ಕಾರದವರು ಕ್ರಮ ಕೈಗೊಳ್ಳದಿರಲು ಕಾರಣಗಳೇನು?

ಆ) ರಾಜ್ಯದ ಎಲ್ಲಾ ನಗರಗಳಲ್ಲಿಯೂ ಈ ಯೋಜನೆಗೆ ಅರ್ಹರಾಗುವ ಫಲಾನುಭವಿಗಳು ಎಷ್ಟು, (ನಗರವಾರು ಮಾಹಿತಿ ನೀಡುವುದು).

ಇ) ಸರ್ಕಾರದವರು ಇವರಿಗಾಗಿ ಕೊಡಬೇಕಾದ ಸಬ್ಸಿಡಿ ಹಣ ಎಷ್ಟು?

ಶ್ರೀ ಎಸ್. ನಂಜಪ್ಪ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) :

ಅ) ಸಹಾಯಧನಯುಕ್ತ ಆಹಾರಧಾನ್ಯಗಳನ್ನು ನೀಡುವ ಯೋಜನೆಯು ದಿನಾಂಕ 1.11.95ಕ್ಕೂ ಹಿಂದಿನಿಂದಲೂ ಜಾರಿಯಲ್ಲಿದೆ. ಆದೇಶ ಸಂಖ್ಯೆ ಎಫ್ ಸಿ ಎಸ್ 789 ಡಿಆರ್ಎ 95 ದಿನಾಂಕ 14.11.95ರಲ್ಲಿ ಸಹಾಯದನದಡಿ ಆಹಾರಧಾನ್ಯಗಳ ವಿತರಣೆಯನ್ನು ನಗರ ಪ್ರದೇಶಗಳ ಎಲ್ಲಾ ಬಡಜನರಿಗೂ ಒಳಗೊಂಡಂತೆ ದಿನಾಂಕ 1.1.96ರಿಂದ ಜಾರಿಗೆ ಬರುವಂತೆ ವಿಸ್ತರಿಸಲಾಗಿದೆ.

ಆ) ರಾಜ್ಯದಲ್ಲಿರುವ ಪೋಷಿತ ಮತ್ತು ಅಪೋಷಿತ ಕೊಳಚೆ ಪ್ರದೇಶಗಳಲ್ಲಿ ಸಮೀಕ್ಷೆ ನಡೆಸಿದಾಗ್ಗೆ 5.92.972 ಅರ್ಜ ಫಲಾನುಭವಿಗಳೆಂದು ಗುರುತಿಸಲಾಗಿದೆ. ನಗರವಾರು ಮಾಹಿತಿ ಸದ್ಯಕ್ಕೆ ಲಭ್ಯವಿಲ್ಲ.

ಇ) ಸರ್ಕಾರವು ಮಾಹೆಯಾನ ರೂ.1.69 ಕೋಟಿ ರೂಪಾಯಿಗಳನ್ನು ಅಥವಾ ವಾರ್ಷಿಕ 20.26 ಕೋಟಿ ರೂಪಾಯಿಗಳನ್ನು ಹೆಚ್ಚುವರಿ ಸಹಾಯಧನ ಭರಿಸಬೇಕಾಗುತ್ತದೆ.